ಅಷ್ಟನ್ನು ಒದಗಿಸುತ್ತೇವೆ. ತಹಸೀಲ್ದಾರು ಮಳೆ ಹೇಗೆ ಬಿದ್ದಿದೆ ಎಂಬ ಬಗ್ಗೆ ರಿಪೋರ್ಟ್ ಕಳುಹಿಸುತ್ತಾರೆ. ಅದರ ಮೇಲೆ ನಾವು ಶೇಕಡಾ 40 ಪರ್ಸೆಂಟ್‌ಗಿಂತ ಒಳಗಿದ್ದರೆ ಮಳೆ ಅಂತಹ ಸಮಯದಲ್ಲಿ ಹೆಚ್ಚಿನ ರಿಲೀಫ್ ನಾವು ಪ್ರೊವೈಡ್ ಮಾಡಬೇಕು. ಆದರೆ ಮಾನ್ಯ ಕೃಷ್ಣಮೂರ್ತಿಯವರ ತಾಲ್ಲೂಕು ಒಳಗಿರುವುದರಿಂದ ಅದು ಬಂದಿಲ್ಲ. ಏನಾದರೂ ತೊಂದರೆ ಇದ್ದರೆ ತೀರ್ಮಾನ ಮಾಡೋಣ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಮೊನ್ನೆ ಕಂದಾಯ ಸಚಿವರು ಕೊಟ್ಟಂಥ ಬರಗಾಲದ ವರದಿಯಲ್ಲಿ ಕಡೂರು ತಾಲ್ಲೂಕಿನಲ್ಲಿ ಕಡಿಮೆ ಬಿದ್ದಂಥ.....

ಅಧ್ಯಕ್ಷರು : ನಾನು ಈಗ ಏನು ಮಾಡಲಿ ಹೇಳಿ. ನೀವೆಲ್ಲಾ ಸೇರಿ ನನ್ನನ್ನು ಇಲ್ಲಿಗೆ ಕೂರಿಸಿದ್ದೀರಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ : ಬರಗಾಲಕ್ಕೆ ಸೇರಿಸಬೇಕು ಅಷ್ಟೇ. ಇಲ್ಲಿಯವರಿಗೆ ಕಡೂರು ತಾಲ್ಲೂಕಿನಲ್ಲಿ ಮಳೆ ಬಂದಿಲ್ಲ. ಅಲ್ಲಿ ಕುಡಿಯುವ ನೀರಿನ ತೊಂದರೆಯಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿ, ಅಲ್ಲಿ ಅವಶ್ಯಕತೆಗೆ ತಕ್ಕಂತೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಶ್ರೀ ಆರ್. ಕೃಷ್ಣಪ್ಪನವರು.

ಶ್ರೀ ಆರ್. ಕೃಷ್ಣಪ್ಪ : ಪ್ರಶ್ನೆ ಸಂಖ್ಯೆ 3739ನೇ ಪ್ರಶ್ನೆಯನ್ನು ಕೇಳುತ್ತೇನೆ.

ಅಧ್ಯಕ್ಷರು : ಸಾರಿಗೆ ಮಂತ್ರಿಗಳು ಯಾಪ ಕಡೆ ಹೋದರು? ಪಾಪ ಮೊದಲು ಕರೆದಾಗ ಅವರು ಇರಲಿಲ್ಲ. ನಾವು ಅಡ್ಜಸ್ಟ್ ಮಾಡಿಕೊಳ್ಳಬೇಕಲ್ಲಾ. ಅವರಿಗೂ ಪಾಪ ಬೇರೆ ಬೇರೆ ಎಷ್ಟೋ ಕೆಲಸಗಳು ಇರುತ್ತವೆ. ಸದಸ್ಯರಿಗೆ ಸಾಕಷ್ಟು ಕೆಲಸಕಾರ್ಯಗಳು ಇರುತ್ತವೆ. ನಾವು ಸ್ವಲ್ಪ ಅಡ್ಜಸ್ಟ್ ಮಾಡಿಕೊಂಡು ಹೋಗಬೇಕು. ಅದು ನನ್ನ ಡ್ಯೂಟಿ. ಆದ್ದರಿಂದ ಅವರು ಯಾವಾಗ ಬಂದರೂ ನಾನು ಕರೆಯಬೇಕು. ಕರೆಯುತ್ತೇನೆ.

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) : ಸಾಮಾನ್ಯವಾಗಿ ಆ ಅಭ್ಯಾಸ ಇರಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರಿಗೆ ಈ ಅಧಿಕಾರ ವಿಶೇಷ ಸಂದರ್ಭದಲ್ಲಿ ಇದೆ.

ಶ್ರೀ ಸಿ. ಬೈರೇಗೌಡ : ಇರಲಿಲ್ಲ ಎಂದು ನಾನು ಹೇಳಿದ್ದು.

ಅಧ್ಯಕ್ಷರು : ಆಯಿತು. ನಾಳೆ ಟೇಬಲ್ ಮಾಡೋಣ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿ ಮಂಡನೆ.

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : 14.9.95ರ 22ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 44 ಪ್ರಶ್ನೆಗಳ ಪೈಕಿ 30 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.